ಸಾಕ್ಷಿ ಯನ್ನು ದಿಃ 26.09.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ಆರೋಪಿ ನನ್ನ ಬಳಿ ಹಣ ಕೇಳಿದ ದಿನವೇ ದಿಃ 13.12.2019 ಆತನಿಗೆ ಹಣ ನೀಡಿರುತ್ತೇನೆ.
2. ಆರೋಪಿ ಯಾವ ಉದ್ದೇಶಕ್ಕೆ ನಿಮ್ಮ ಬಳಿ ಹಣ ಕೇಳಿದ್ದರು ಎಂದರೆ, ವ್ಯಾಪಾರ ಮಾಡಲು ಎಂದು ಕೇಳಿದ್ದರು. ಸದರಿ ವಿಚಾರವನ್ನು ದೂರಿನಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಆ ರೀತಿ ಬರೆಸಲು ತೊಂದರೆ ಇಲ್ಲ ಎಂದರೆ, ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.
3. ನಾನು ಆರೋಪಿಗೆ ನಗದು ಹಣ ನೀಡಿರುತ್ತೇನೆ.
4. ಹಣ ನೀಡುವ ಮುಂಚೆ ಸದರಿ ಹಣವನ್ನು ಮನೆಯಲ್ಲಿ ಇಟ್ಟಿದ್ದೆ.
5. ಹಣವನ್ನು ಆರೋಪಿಗೆ ಯಾವ ಸ್ಥಳದಲ್ಲಿ ನೀಡಿದ್ದಿರಾ ಎಂದರೆ, ಸ್ಥಳ ನೆನಪಿಲ್ಲ, ಅದರೆ ಸುಂಡವಾಳು ಗ್ರಾಮದಲ್ಲಿ ನೀಡಿರುತ್ತೇನೆ.
6. ನಾನು ಆರೋಪಿಗೆ ಹಣ ನೀಡುವಾಗ ಬೇರೆ ಯಾರೂ ಇರಲಿಲ್ಲ.
7. ಆರೋಪಿ ನಾನು ಹಣ ನೀಡಿದ ದಿನವೇ ಚೆಕ್ ನೀಡಿರುತ್ತಾರೆ. ಅವರು ಚೆಕ್ ನೀಡಿದ ನಂತರವೇ ನಾನು ಹಣ ನೀಡಿರುತ್ತೇನೆ.
8. ನಿಪಿ - 1 ರಲ್ಲಿ ಒಕ್ಕಣೆಗಳನ್ನು ಯಾರು ಬರೆದಿದ್ದು ಎಂದರೆ, ಅವರೇ ಬರೆಸಿಕೊಟ್ಟಿದ್ದರು, ಯಾರ ಬಳಿ ಬರೆಸಿದ್ದರು ಎಂದು ನನಗೆ ಗೊತ್ತಿಲ್ಲ.
9. ನಿಪಿ -1(ಎ) ಸಹಿಯನ್ನು ಆರೋಪಿಯೇ ಮಾಡಿ ನನಗೆ ನೀಡಿರುತ್ತಾರೆ.
10. ನಿಪಿ - 1 ರಲ್ಲಿರುವ ಬರವಣಿಗೆಗೆ ಹಾಗೂ ಸಹಿಯ ಶೈಲಿಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.
11. ನಿಪಿ -1 ರಲ್ಲಿ ದಿನಾಂಕ 13 ಮತ್ತು ತಿಂಗಳು 12 ಎಂದು ಇದೆ ಎಂದರೆ ಸರಿ. ಅದರಲ್ಲಿ ವರ್ಷ ಅಪೂರ್ಣವಾಗಿದೆ ಎಂದರೆ ಸರಿಯಲ್ಲ.
12. ನಮಗೆ ಬಿ.ಪಿ.ಎಲ್ ಪಡಿತರ ಚೀಟಿ ಇದೆ.
13. ನಿಮ್ಮ ವಾರ್ಷಿಕ ವರಮಾನ ಎಷ್ಟು ಎಂದರೆ, ಖರ್ಚು ಕಳೆದು 4 ಲಕ್ಷ ಉಳಿಯಬಹುದು.
14. ನಮ್ಮ ಕುಟುಂಬದ ಅವಶ್ಯಕತೆಗೆ ತಿಂಗಳಿಗೆ ಎಷ್ಟಾಗುತ್ತದೆ ಎಂದರೆ, ತಿಂಗಳಿಗೆ ಲೆಕ್ಕ ಮಾಡುವುದಿಲ್ಲ ಎಂದು ನುಡಿಯುತ್ತಾರೆ.
15. ಗ್ರಾಮೀಣ ಪ್ರದೇಶದಲ್ಲಿ 15 ಸಾವಿರ ಹಾಗೂ ನಗರ ಪ್ರದೇಶದಲ್ಲಿ 15 ಸಾವಿರಕ್ಕಿಂತ ಹೆಚ್ಚು ವಾರ್ಷಿಕ ವರಮಾನ ಇದ್ದರೆ ಬಿ.ಪಿ.ಎಲ್ ಪಡಿತರ ಕಾರ್ಡ್ ಕೊಡುವುದಿಲ್ಲ ಎಂದರೆ, ನನ್ನ ವೈಯಕ್ತಿಕ ಆದಾಯ ಖರ್ಚು ಕಳೆದು ವರ್ಷಕ್ಕೆ 1 ಲಕ್ಷ ಉಳಿಯಬಹುದು ಎಂದು ನುಡಿಯುತ್ತಾರೆ.

16. ಈ ಪ್ರಕರಣ ಹೊರತುಪಡಿಸಿ ನೀವು ಹಲವಾರು ಹಣಕಸಿಗೆ ಸಂಬಂಧಪಟ್ಟ ಪ್ರಕರಣಗಳನ್ನು ಹಾಕಿದ್ದೀರಾ ಎಂದರೆ, ಚೆಕ್ ಹಾಗೂ ಹಣಕ್ಕಾಗಿ ಹಾಕಿಲ್ಲ ಜಮೀನಿಗೆ ಸಂಬಂಧಪಟ್ಟಂತೆ ಇವೆ ಎಂದು ನುಡಿಯುತ್ತಾರೆ.

17. ಅ.ದಾ.ನಂ.196/2012 ರಲ್ಲಿ ಸಣ್ಣಚಿಕ್ಕೇಗೌಡರವರ ವಿರುದ್ಧ ಹಣಕಾಸು ವಸೂಲಿಗಾಗಿ ದಾವೆ ಹಾಕಿದ್ದಿರಾ ಎಂದರೆ, ಅದು ಮುಗಿದು 4-5 ವರ್ಷ ಆಗಿದೆ ಎಂದು ನುಡಿಯುತ್ತಾರೆ.

18. ಎಸ್.ಎನ್. ನಾಗರಾಜಶೆಟ್ಟಿ ರವರ ಮೇಲೆ ಸಹ ನೀವು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ, ಪ್ರೊನೋಟ್ ಕೇಸ್ ಹಾಕಿದ್ದೆ, ಅದು ಮುಗಿದು 5 ವರ್ಷ ಆಗಿದೆ.

19. ಅಮಲ್ಜಾರಿ ಸಂ.43/2007 ರಂತೆ ಸ್ವಾಮಿಗೌಡರ ಮೇಲೆ ಹಣಕಾಸು ರಿಕವರಿ ಪ್ರಕರಣ ಹಾಕಿದ್ದೀರಿ ಎಂದರೆ, ಇಲ್ಲ.

20. ನಿಪಿ- 1 ರಲ್ಲಿ ದಿನಾಂಕ ಮತ್ತು ವರ್ಷವನ್ನು ಆರೋಪಿಯೇ ಬರೆದಿರುತ್ತಾರೆ.

21. ನಿಪಿ - 1 ರಲ್ಲಿ ವರ್ಷ ಅಪೂರ್ಣವಾಗಿ ಬರೆದಿರುವುದು ನಿಮ್ಮ ಗಮನಕ್ಕೆ ಇದೆ ಎಂದರೆ, ನನಗೆ ಈಗ ಬುದ್ಧಿಶಕ್ತಿ ಹಾಗೂ ನೆನಪು ಕಡಿಮೆ ಆಗಿದೆ ಎಂದು ನುಡಿಯುತ್ತಾರೆ.

22. ನಿಪಿ - 1 ರಲ್ಲಿ ವರ್ಷ ಅಪೂರ್ಣವಾಗಿದ್ದರೂ ಬ್ಯಾಂಕ್ ಅಧಿಕಾರಿಗಳೊಂದಿಗೆ ನೀವು ಶಾಮೀಲಾಗಿ ಹಿಂಬರಹ ಪಡೆದಿದ್ದೀರಾ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ